

**ಸುರಿವ** ಈ ಮಳೆಯಲ್ಲಿ
ನಿಂತು ಹೂ ಬಿಡಿಸುವಾಗೆಲ್ಲ
ನನದು ಒಂದೇ ಚಿಂತೆ.
'ಒಮ್ಮೆಯಾದರೂ ದುಂಬಿ
ಮುಟ್ಟೀತೋ ಇಲ್ಲವೋ,
ಅದಕಾಗಿ ಹೂ ನೊಂದಿತೋ ಏನೋ?'

ರವಿ ಏರಿಳಿವ ಹೊತ್ತಿಗೆ
ಮರಿದುಂಬಿ, ಕಿರುದುಂಬಿ
ಹೆದ್ದುಂಬಿಗಳ
ಹೆದೆಮುರಿಗೆ ಗದಗುಡುತ್ತಿದ್ದ
ಆ ಡೇರೆಯ ಬಳಿಯೂ
ಯಾರಿಲ್ಲವಿಗೀಗಾ.
ತುಂಬೆ, ನಿಂಬೆ, ಮೊಲ್ಲೆ
ಗುಲಾಬಿಗಳ ಎಳಸುಗೆನ್ನೆಗಳಲೂ
ಯಾವುದೋ ಕೊರತೆ.

ಸುರಿಮಳೆಯ ನಡುವೆಯೇ
ಮೊರೆವ ಸದ್ದಿಗೆ ಕಾದ ಹಾಗೆ.
ತೋಯ್ದು ತೊಪ್ಪೆಯಾದಗಲೇ
ಎದೆಯೊಳಗೆ ಕುದಿವ ಬೇಗೆ.

ತುಸು ಬೀಸುವ ಗಾಳಿಗೆ
ತವಕದ ತಿಮಿರುಕ್ಕಿ
ಅತಿಯಾದ ಹಳಹಳಿಕೆ.
ಹೂವಾದರೇನು?
ಭಾವಗಳ ತೆರೆದು
ತೋರುವುದು ಸಂಸ್ಕಾರವೇ?
ಸುಮ್ಮನೆ ಬಾಗುತ್ತದೆ
ಆ ಬದಿಗೆ, ಒಮ್ಮೆ ಈ ಬದಿಗೆ
ರಾಗ ತಿಳಿಯದ ಹಾಡಿಗೆ
ಅವಳು ತಲೆದೂಗಿದ ಹಾಗೆ.

ಕಳ್ಳಗಣ್ಣೊಳಗೇನೋ
ಸಣ್ಣ ಕನಸು.
ಯಾರೋ ಝೇಂಕರಿಸಿದ ಸದ್ದು.

ಎಲ್ಲಾ ನಲ್ಲೆಯರಂತೆ
ತೋರಿಕೆಯ ಗಾಂಭೀರ್ಯ.
ಸೇರಬಹುದು
ಊರಬಹುದು
ಮೀರಬಹುದೆಂಬ ಪೋರ ಮನ.
ಹೂ ಬಿಡಿಸಬಂದವಳ
ಹೆಜ್ಜೆ ಸದ್ದಿಗೆ ಎದೆ ನಡುಗಿ
ಬೆಚ್ಚಿ ಬಿದ್ದಿದೆ ಹೂದೋಟ
ಒಮ್ಮೆಗೆ.

ಕಾವು ಕಳೆಯುವ ಮುನ್ನವೇ
ಕನಸು ಮುಗಿಯುವುದೇ.
ಅರಿಯುವ ಮುನ್ನವೇ
ಅರಿಯ ಪಾಲಾಗುವೆನೇ?

ಇದು...
ಹೇಳಲಾಗದ ಗುಟ್ಟು
ಒಡೆಯಲಾಗದ ಒಡಪು
ಹಾಡಲಾಗದ ರಾಗ
ನಟಿಸಲಾಗದ ಬೆಡಗು.

'ಇಂದು ಹೂವಿನ ವಿನಃ
ಪೂಜೆ ದೇವರಿಗೆ.'
ನಾನು ನಿರ್ಧರಿಸಿದೆ.
ತೋರಿಕೆಯ ಗರತಿಯು
ಮೆಲ್ಲ ನೇವರಿಸಿ
ಸಣ್ಣಗೆ ನಡುಗಿದೆ.

● **ನಂದಿನಿ ವಿಶ್ವನಾಥ ಹೆದ್ದುರ್ಗ**